ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1517

ಸದಸ್ಯರ ಹೆಸರು : ಶ್ರೀ ಕೆ.ಎ ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 19.03.2020

ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿರವರು

****

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ನಗರ ವ್ಯಾಪ್ತಿಯಲ್ಲಿ ದಿನೇ ದಿನೇ ವಾಹನಗಳು ಅಧಿಕವಾಗುತ್ತಿದ್ದು, ಟ್ರಾಫಿಕ್ ಜಾಮ್ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು.
ಆ)	ಬಂದಿದ್ದಲ್ಲಿ, ಬೆಂಗಳೂರು ನಗರದಲ್ಲಿ ವಾಹನ ದಟ್ಟಣೆಯನ್ನು ನಿವಾರಿಸಲು ಈ ಹಿಂದಿನ ಮೈತ್ರಿ ಸರ್ಕಾರ ಬಿಡಿಎ ಯಿಂದ ಕೈಗೊಂಡ ಫೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ಮತ್ತು ಕೆ.ಆರ್.ಡಿ.ಸಿ.ಎಲ್ ವತಿಯಿಂದ ಕೈಗೊಂಡ ಎಲಿವೇಟ್ ಕಾರಿಡಾರ್ ಕಾಮಗಾರಿಗಳು ಯಾವ ಹಂತದಲ್ಲಿದೆ? (ವಿವರ ನೀಡುವುದು)	ಫೆರಿಫೆರಲ್ ರಿಂಗ್ ರಸ್ತೆ ಯೋಜನೆಯನ್ನು ಶೀಘ್ರಗತಿಯಲ್ಲಿ ಅನುಷ್ಠಾನಗೊಳಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳುತ್ತಿದೆ. ಸರ್ಕಾರವು ರೂ.100.00ಕೋಟಿ ಮೊತ್ತವನ್ನು ಭೂಸ್ವಾಧೀನ ಪ್ರಕ್ರಿಯೆಗಾಗಿ ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ. ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣಕ್ಕಾಗಿ ರೂ.5616.41 ಕೋಟಿಗಳು ಅಗತ್ಯವಿದ್ದು, ರೂ.4714.69 ಕೋಟಿ ಅಂದರೆ ಶೇ.84 ರಷ್ಟು ಮೊತ್ತವನ್ನು ಜಪಾನ್ ಇಂಟರ್ ನ್ಯಾಷನಲ್ ಕೋ-ಆಪರೇಷನ್ ಏಜೆನ್ಸಿ ಯಿಂದ ಸಾಲದ ರೂಪದಲ್ಲಿ ಪಡೆಯಲು ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಉಳಿದ ಶೇ.16 ರಷ್ಟು ಮೊತ್ತವಾದ ರೂ. 901.72 ಕೋಟಿಗಳನ್ನು ರಾಜ್ಯ ಸರ್ಕಾರ ಭರಿಸುತ್ತಿದೆ. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಟೆಂಡರ್ ಆಹ್ವಾನಿಸಿ ಫೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ಮಾಡಲು ಕ್ರಮತೆಗೆದುಕೊಳ್ಳಲಾಗುವುದು. ಎಲಿವೇಟೆಡ್ ಕಾರಿಡಾರ್ ಯೋಜನೆಯನ್ನು ಕೆ.ಆರ್.ಡಿ.ಸಿ.ಎಲ್ ವತಿಯಿಂದ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಲೋಇ/ ಇಎಪಿ/ 2018 (P1), ದಿನಾಂಕ:02-03-2019 ರಂತೆ 87.87 ಕಿ.ಮೀ ಉದ್ದ ಎಲಿವೇಟೆಡ್ ಕಾರಿಡಾರ್ ಯೋಜನೆಯನ್ನು ನಾಲ್ಕು ಹಂತಗಳಲ್ಲಿ ಅನುಷ್ಠಾನಗೊಳಿಸಲು ಯೋಜಿಸಿದ್ದು, ಯೋಜನೆಗೆ ಸರ್ಕಾರವು ರೂ.26,960.00 ಕೋಟಿಗಳಿಗೆ ತಾತ್ವಿಕ ಅನುಮೋದನೆ ನೀಡಲಾಗಿರುತ್ತದೆ. ಒಂದನೇ ಹಂತದ ನಾಲ್ಕು ಪ್ಯಾಕೇಜ್‌ಗಳ ಪೈಕಿ, ಮೂರು ಪ್ಯಾಕೇಜ್‌ಗಳಿಂದ ಒಟ್ಟಾರೆಯಾಗಿ ಬ್ಯಾಪ್ಟಿಸ್ಟ್ ಆಸ್ಪತ್ರೆಯಿಂದ-ಕಂಟೋನ್‌ಮೆಂಟ್-ರಿಚ್‌ಮಂಡ್ ಸರ್ಕಲ್-ಶಾಂತಿನಗರ ಬಸ್‌ನಿಲ್ದಾಣ- ಬಾಷ್ ಆವರಣ ಮೂಲಕ ಹೊಸೂರು ರಸ್ತೆ ಮುಖಾಂತರ ಸಿಲ್ಕ್ ಬೋರ್ಡ್ ವರೆಗೆ 21.55 ಕಿ.ಮೀ ಉದ್ದಕ್ಕೆ ಎಲಿವೇಟೆಡ್ ಕಾರಿಡಾರ್ ನಿರ್ಮಿಸಲು ರೂ.6,855 ಕೋಟಿ ಮೊತ್ತಕ್ಕೆ (ಭೂಸ್ವಾಧೀನ ಮತ್ತು ಯುಟಿಲಿಟಿ ಸ್ಥಳಾಂತರ ಮೊತ್ತ ಸೇರಿ) 2019-20 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸರ್ಕಾರದ ಆದೇಶದಂತೆ ಮೊದಲನೇ ಹಂತದಲ್ಲಿ ನಾರ್ತ್-ಸೌತ್ ಕಾರಿಡಾರ್ ಅನ್ನು ಮೂರು ಪ್ಯಾಕೇಜ್‌ಗಳಲ್ಲಿ ಅನುಷ್ಠಾನಗೊಳಿಸಲು ಅಧಿಸೂಚನೆ ಸಂಖ್ಯೆ: KRDCL/ IFB/2018-19/23 ದಿನಾಂಕ: 02-03-2019 ರಲ್ಲಿ ಬ್ಯಾಪ್ಟಿಸ್ಟ್ ಆಸ್ಪತ್ರೆಯಿಂದ-ಕಂಟೋನ್‌ಮೆಂಟ್-ರಿಚ್‌ಮಂಡ್‌ಸರ್ಕಲ್-ಶಾಂತಿನಗರ ಬಸ್‌ನಿಲ್ದಾಣ-ಬಾಷ್ ಆವರಣ ಮೂಲಕ ಹೊಸೂರು ರಸ್ತೆ ಮುಖಾಂತರ ಸಿಲ್ಕ್ ಬೋರ್ಡ್ ವರೆಗೆ

		21.55 ಕಿ.ಮೀ ಉದ್ದಕ್ಕೆ ಎಲಿವೇಟೇಡ್ ಕಾರಿಡಾರ್ ನಿರ್ಮಿಸಲು ನಿರ್ಮಾಣ ಮೊತ್ತ ರೂ.4612.49 ಕೋಟಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸಲು ಪರಿಷ್ಕೃತ ಕೊನೆಯ ದಿನಾಂಕವು 24-06-2019 ನಿಗದಿಪಡಿಸಲಾಗಿತ್ತು. ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 48720/2014(PIL) ದಾವೆ ಇದ್ದು, ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದ್ದ ಕಾರಣ ಟೆಂಡರ್‌ನ ಮುಂದಿನ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ. ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ: ಲೋಇ:215ಇಎಪಿ2018 ದಿನಾಂಕ: 17-09-2019 ರಲ್ಲಿ ಮೂರು ಪ್ಯಾಕೇಜುಗಳಲ್ಲಿ ಆಹ್ವಾನಿಸಿರುವ ಟೆಂಡರ್‌ಗಳ ಪ್ರಕ್ರಿಯೆಗಳನ್ನು ರದ್ದುಗೊಳಿಸಲು ಆದೇಶಿಸಿದ್ದು, ಅದರಂತೆ ಪ್ರಸ್ತಾಪಿತ ಟೆಂಡರ್‌ಗಳನ್ನು ರದ್ದುಗೊಳಿಸಲಾಗಿದೆ.
ಇ)	ಎಲಿವೇಟ್ ಕಾರಿಡಾರ್ ಮತ್ತು ಫೆರಿಫೆರಲ್ ರಿಂಗ್ ರಸ್ತೆಯ ಈ ಯೋಜನೆಗಳ ಅಂದಾಜು ವೆಚ್ಚವೆಷ್ಟು? ಎಷ್ಟು ಉದ್ದ ಮಾಡಲು ಉದ್ದೇಶಿಸಲಾಗಿತ್ತು ಮತ್ತು ಯೋಜನೆಗಳ ಅನುಷ್ಠಾನ ಯಾವ ಹಂತದಲ್ಲಿದೆ? (ವಿವರ ನೀಡುವುದು)	ಉದ್ದೇಶಿತ ಫೆರಿಫೆರಲ್ ರಿಂಗ್ ರಸ್ತೆಯು ತುಮಕೂರು ರಸ್ತೆಯಿಂದ ಹಳೇ ಮದ್ರಾಸ್ ರಸ್ತೆ ಮಾರ್ಗವಾಗಿ ಹೊಸೂರು ರಸ್ತೆಯವರೆಗೆ 65.56 ಕಿ.ಮೀ ಇರುತ್ತದೆ. ಪೆರಿಫೆರಲ್ ರಿಂಗ್ ರಸ್ತೆಯನ್ನು ಅಂದಾಜು ರೂ.14458.41 ಕೋಟಿ (ರೂ.8842.00 ಕೋಟಿ ಭೂಸ್ವಾಧೀನಕ್ಕಾಗಿ + ರೂ.5616.41 ಕೋಟಿ ರಸ್ತೆ ನಿರ್ಮಾಣಕ್ಕಾಗಿ) ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ 87.87 ಕಿ.ಮೀ ಉದ್ದದ ಎಲಿವೇಟೆಡ್ ಕಾರಿಡಾರ್ ಯೋಜನೆಯನ್ನು ನಾಲ್ಕು ಹಂತಗಳಲ್ಲಿ ರೂ.26,960.00 ಕೋಟಿಗಳ ಮೊತ್ತದಲ್ಲಿ ಅನುಷ್ಠಾನಗೊಳಿಸಲು ತಾತ್ವಿಕ ಅನುಮೋದನೆ ದೊರೆತ್ತಿರುತ್ತದೆ. ಒಂದನೇ ಹಂತದ ನಾಲ್ಕು ಪ್ಯಾಕೇಜ್‌ಗಳ ಪೈಕಿ, ಮೂರು ಪ್ಯಾಕೇಜ್‌ಗಳಿಂದ ಒಟ್ಟಾರೆಯಾಗಿ ಬ್ಯಾಪ್ಟಿಸ್ಟ್ ಆಸ್ಪತ್ರೆಯಿಂದ-ಕಂಟೋನ್‌ಮೆಂಟ್-ರಿಚ್‌ಮಂಡ್ ಸರ್ಕಲ್-ಶಾಂತಿನಗರ ಬಸ್‌ನಿಲ್ದಾಣ- ಬಾಷ್ ಆವರಣ ಮೂಲಕ ಹೊಸೂರು ರಸ್ತೆ ಮುಖಾಂತರ ಸಿಲ್ಕ್ ಬೋರ್ಡ್ ವರೆಗೆ 21.55 ಕಿ.ಮೀ ಉದ್ದಕ್ಕೆ ಎಲಿವೇಟೇಡ್ ಕಾರಿಡಾರ್ ನಿರ್ಮಿಸಲು ರೂ.6,855 ಕೋಟಿ ಮೊತ್ತಕ್ಕೆ (ಭೂಸ್ವಾಧೀನ ಮತ್ತು ಯುಟಿಲಿಟಿ ಸ್ಥಳಾಂತರ ಮೊತ್ತ ಸೇರಿ) 2019-20 ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಕ್ರಮ ಸಂಖ್ಯೆ (ಆ) ನಲ್ಲಿ ಪ್ರಸ್ತಾಪಿಸಿರುವಂತೆ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 48720/2014(PIL) ದಾವೆ ಇರುವುದರಿಂದ ಹಾಗೂ ಸರ್ಕಾರದ ಪತ್ರ ಸಂಖ್ಯೆ: ಲೋಇ:215ಇಎಪಿ2018 ದಿನಾಂಕ: 17-09-2019 ರಲ್ಲಿ ಮೂರು ಪ್ಯಾಕೇಜುಗಳಲ್ಲಿ ಆಹ್ವಾನಿಸಿರುವ ಟೆಂಡರ್‌ಗಳ ಪ್ರಕ್ರಿಯೆಗಳನ್ನು ರದ್ದುಗೊಳಿಸುವಂತೆ ಆದೇಶಿಸಿರುವಂತೆ ಪ್ರಸ್ತಾಪಿತ ಟೆಂಡರ್‌ಗಳನ್ನು ರದ್ದುಗೊಳಿಸಲಾಗಿದೆ.

ಸಂಖ್ಯೆ: ನಅಇ 68 ಬೆಂಭೂಸ್ವಾ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ